


ಪ್ರೀತಿಯನ್ನು ಗಳಿಸಿದ್ದರು. ಕಿರುತೆರೆಯ 'ಕನ್ನಡದ ಕೋಟ್ಯಧಿಪತಿ' ಕಾರ್ಯಕ್ರಮ ಕೂಡ ಅವರ ವ್ಯಕ್ತಿತ್ವದ ವಿಸ್ತರಣೆಯಂತಿತ್ತು.

ತಮ್ಮ ತಂದೆಯವರಂತೆಯೇ ನಟನೆ ಹಾಗೂ ಹಾಡುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದ ಪುನೀತ್, ತಾಯಿಯಂತೆ ಸಿನಿಮಾ ನಿರ್ಮಾಣದಲ್ಲೂ ಆಸಕ್ತಿ ವಹಿಸಿದ್ದರು. ಅವರ 'ಪಿಆರ್‌ಕೆ ಪ್ರೊಡಕ್ಷನ್ಸ್' ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿತ್ತು.

ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್ ನಂತರದ ತಲೆಮಾರುಗಳ ತಾರಾ ವರ್ಚಸ್ಸಿನ ನಟರ ಸಾಲಿನಲ್ಲಿ ಪುನೀತ್‌ರ ಜೊತೆಗೆ ರವಿಚಂದ್ರನ್, ಶಿವರಾಜ್‌ಕುಮಾರ್ ರಮೇಶ್ ಅರವಿಂದ್, ದರ್ಶನ್, ಯಶ್, ಸುದೀಪ್, ಉಪೇಂದ್ರರಂಥ ತಾರೆಗಳನ್ನೂ ನೆನಪಿಸಿಕೊಳ್ಳಬೇಕು. 'ಪ್ರೇಮಲೋಕ', 'ರಣಧೀರ', 'ಶಾಂತಿ ಕ್ರಾಂತಿ'ಗಳಂಥ ಸಿನಿಮಾಗಳನ್ನು ನೀಡಿದ ರವಿಚಂದ್ರನ್ ಕನ್ನಡ ಚಿತ್ರರಂಗದ ಶೋಮ್ಯಾನ್. ನೂರು ಚಿತ್ರಗಳನ್ನು ದಾಟಿ ಮುನ್ನಡೆದಿರುವ, ಈಗಲೂ ಬೇಡಿಕೆ ಉಳಿಸಿಕೊಂಡಿರುವ ಶಿವರಾಜ್‌ಕುಮಾರ್, ರಾಜ್ ಕುಟುಂಬದ ಪ್ರತಿನಿಧಿ; ತಂದೆಯಂತೆಯೇ ಎಲ್ಲ ಬಗೆಯ ಪಾತ್ರಗಳಲ್ಲಿ ಅಭಿನಯಿಸಿರುವ ಪ್ರತಿಭಾವಂತ ಕಲಾವಿದ. ದರ್ಶನ್, ಯಶ್, ಸುದೀಪ್ ಈ ಹೊತ್ತಿನ ಕನ್ನಡ ಸಿನಿಮಾ ಮಾರುಕಟ್ಟೆಯನ್ನು ವಿಸ್ತರಿಸುತ್ತಿರುವ ಕಲಾವಿದರು.

## ಅಪೂರ್ಣ ನೆನಪು

**ಕನ್ನಡ** ಚಿತ್ರರಂಗದ ಒಂಬತ್ತು ದಶಕಗಳನ್ನು ಒಂಬತ್ತು ಆಯಾಮಗಳ ಮೂಲಕ ಕಟ್ಟಿಕೊಡುವ ಈ ಅವಲೋಕನ ಪೂರ್ಣವಾದುದೇನಲ್ಲ. ಚಿತ್ರರಂಗಕ್ಕೆ ಕೊಡುಗೆ ನೀಡಿದ ಎಲ್ಲರ ಸಾಧನೆಯನ್ನು ನೆನಪಿಸಿಕೊಳ್ಳುವುದು ಇಲ್ಲಿ ಸಾಧ್ಯವಾಗಿಲ್ಲ, ಹೆಸರುಗಳನ್ನು ದಾಖಲಿಸುವುದು ಈ ಅವಲೋಕನದ ಉದ್ದೇಶವೂ ಅಲ್ಲ. ಮುಖ್ಯವಾಗಿ, ಕನ್ನಡ ಸಿನಿಮಾಕ್ಕೆ ಅಸಾಧಾರಣ ಕೊಡುಗೆ ನೀಡಿದ ಮಹಿಳೆಯರ ಸಾಧನೆಯನ್ನು ಗುರ್ತಿಸುವುದು ಇಲ್ಲಿ ಸಾಧ್ಯವಾಗಿಲ್ಲ. ಈ ಅವಲೋಕನದ ಉದ್ದೇಶ, ಕನ್ನಡ ಚಿತ್ರರಂಗದ ತೊಂಬತ್ತು ವರ್ಷಗಳ ಸಂಭ್ರಮಕ್ಕೆ ಸ್ಪಂದಿಸುವುದಾಗಿದೆ ಹಾಗೂ ಈ ಸಂಕ್ರಮಣ ಸಂದರ್ಭದಲ್ಲಿ ಚಂದನವನದ ಕೆಲವು ಮುಖ್ಯ ಚಲನೆಗಳನ್ನು ನೆನಪಿಸಿಕೊಳ್ಳುವುದಾಗಿದೆ.

## ತೊಂಬತ್ತರ ಈ ಹೊತ್ತು...

ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ತೆರೆ ಕಂಡು ತೊಂಬತ್ತು ವರ್ಷಗಳು. ಈ ಒಂಬತ್ತು ದಶಕಗಳ ಪಯಣದಲ್ಲಿ ಕನ್ನಡ ಚಿತ್ರರಂಗ ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಕನ್ನಡ ಸಿನಿಮಾಪೇಟೆಯ ಕವಲುಗಳು ಕರ್ನಾಟಕದಾಚೆಗೂ ವಿಸ್ತರಿಸಿಕೊಂಡಿವೆ. 'ಕೆಜಿಎಫ್', 'ಕಾಂತಾರ'ದಂಥ ಸಿನಿಮಾಗಳ ಯಶಸ್ಸು ದೇಶದ ಗಮನಸೆಳೆದಿವೆ. ಆದರೆ, ಈ ಪೇಟೆಮಾತಿನ ಆಚೆಗೆ ಕನ್ನಡ ಚಿತ್ರರಂಗದ ಪರಿಸ್ಥಿತಿ ಹೇಗಿದೆ? ಅರ್ಥಪೂರ್ಣ ಸಿನಿಮಾಗಳನ್ನು ರೂಪಿಸುವುದು ಕನ್ನಡ ಚಿತ್ರರಂಗಕ್ಕೆ ಸಾಧ್ಯವಾಗುತ್ತಿದೆಯೆ? ಸೂಕ್ಷ್ಮ ಸಂವೇದನೆಯ ಪ್ರೇಕ್ಷಕ ವರ್ಗವನ್ನು ರೂಪಿಸುವುದು ಕನ್ನಡ ಚಿತ್ರೋದ್ಯಮಕ್ಕೆ ಸಾಧ್ಯವಾಗಿದೆಯೆ? ಕನ್ನಡ ಸಿನಿಮಾಗಳು ಕನ್ನಡ ಸಂಸ್ಕೃತಿಯ ಭಾಗವಾಗಿವೆಯೆ? ರಾಜ್‌ಕುಮಾರ್ ನಂತರ ಕನ್ನಡ ಚಿತ್ರರಂಗಕ್ಕೆ ಸಮರ್ಥ ನಾಯಕತ್ವ ದೊರಕಿದೆಯೆ? ಶೈಕ್ಷಣಿಕ ಚೌಕಟ್ಟು, ತಾತ್ವಿಕ ಚೌಕಟ್ಟು ಕನ್ನಡ ಸಿನಿಮಾಗಳಿಗೆ ದೊರಕಿದೆಯೆ? ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಚಲನಚಿತ್ರ ಅಕಾಡೆಮಿಗಳು ಜಡಗೊಂಡಿವೆಯೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಹೊರಟರೆ ದೊರೆಯುವ ಉತ್ತರಗಳು ಆಶಾದಾಯಕವಾಗಿಯೇನೂ ಇಲ್ಲ.

ತೊಂಬತ್ತರ ಸಂದರ್ಭ ಕನ್ನಡ ಚಿತ್ರರಂಗಕ್ಕೆ ಬಹುದೊಡ್ಡ ಸಂಭ್ರಮವಾಗಿ ಪರಿಣಮಿಸಿ, ಆ ಸಂಭ್ರಮ ಚಿತ್ರರಂಗದ ಆತ್ಮಾವಲೋಕನಕ್ಕೂ ಕಾರಣವಾಗಬೇಕು. ಜಯಮಾಲಾ ಅವರು ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾಗಿದ್ದಾಗ ಕನ್ನಡ ಚಿತ್ರರಂಗದ ಅಮೃತ ಮಹೋತ್ಸವ ಸಮಾರಂಭ ಅದ್ದೂರಿಯಾಗಿ ನಡೆದಿತ್ತು. ಬರಗೂರು ರಾಮಚಂದ್ರಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಚಿತ್ರರಂಗಕ್ಕೆ ಅನನ್ಯ ಕೊಡುಗೆ ಸಲ್ಲಿಸಿದ ಎಪ್ಪತ್ತೈದು ಸಾಧಕರ ಕುರಿತ ಪುಸ್ತಕ ಪ್ರಕಟಣೆಯ ಮೂಲಕ ಅಮೃತ ಮಹೋತ್ಸವದ ಆಚರಣೆ ಅರ್ಥಪೂರ್ಣತೆಯನ್ನೂ ಪಡೆದುಕೊಂಡಿತ್ತು. ಅಂಥ ಸಂಭ್ರಮ ಹಾಗೂ ಅರ್ಥಪೂರ್ಣ ಸಾಧ್ಯತೆಗಳ ಮರುಕಳಿಕೆಗೀಗ ಸುಸಮಯ.

ಪ್ರತಿಕ್ರಿಯಿಸಿ: feedback@sudha.co.in